1ನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ
ಬೆಂಗಳೂರು ನಗರ
ಸಿ.ಸಿ. ನಂ. 13722-2019

ಸಿಡಬ್ಲೂ - 5 ಪಿಡಬ್ಲೂ-4

| | | |
|---|---|---|
| ಸಾಕ್ಷಿದಾರರ ಹೆಸರು | : | ಬಿ. ಪುಟ್ಟಸ್ವಾಮಿ |
| ತಂದೆಯ ಹೆಸರು | : | ಬೆಟ್ಟೇಗೌಡ |
| ವಯಸ್ಸು | : | 73ವರ್ಷ |
| ಕೆಲಸ | : | ಹಾಲು ವ್ಯಾಪಾರ |
| ವಾಸ | : | ಬೆಂಗಳೂರು |

ಸಾಕ್ಷಿಯನ್ನು ದಿನಾಂಕಃ 17-07-2025 ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು.

ಮುಖ್ಯ ವಿಚಾರಣೆ ಹಿ.ಸ.ಸಾ.ಅ. ರವರಿಂದಃ

ಚಾಸಾ 1 ರಿಂದ 4 ರವರು ಮತ್ತು ಆರೋಪಿ ನನ್ನ ಸಂಬಂಧಿಕರು. 2019 ರಲ್ಲಿ ನಾನು ನನ್ನ ಮಗಳ ಮನೆಗೆ ಬಂದಿದ್ದೆ. ಅದೇ ದಿನ ಸಂಜೆ ನಾನು ಚಾಸಾ 1 ಮತ್ತು 4 ರವರು ತಿರುಪತಿಗೆ ಹೋಗಿರುತ್ತೇವೆ, 2 ದಿನ ಬಿಟ್ಟು ವಾಪಸು ಬಂದಿರುತ್ತೇವೆ, ಮನೆಯ ಶೀಟುಗಳನ್ನು ಆರೋಪಿ ಒಡೆದು ಹಾಕಿದ್ದನು. ಅದನ್ನು ಕೇಳಲು ಹೋದ ನನಗೆ ಜಾಗ ನಮ್ಮನ್ನು ಎಂದು ಬೈದಿರುತ್ತಾನೆ. ಚಾಸಾ 1 ರವರನ್ನು ಬಟ್ಟೆ ಬಿಚ್ಚಿಸಿ ಮೆರವಣಿಗೆ ಮಾಡುತ್ತೇನೆ ಎಂದು ಬೆದರಿಕೆ ಹಾಕಿರುತ್ತಾರೆ. ಈ ವಿಚಾರದಲ್ಲಿ ಪೋಲೀಸರಿಗೆ ಹೇಳಿಕೆ ನೀಡಿರುತ್ತೇನೆ.

ಪಾಟೀ ಸವಾಲು ಆರೋಪಿತರ ಪರ ವಕೀಲರಿಂದಃ

ನಾನು ಮಲ್ಲೇಶ್ವರಂನ 16 ನೇ ಕ್ರಾಸಿನಲ್ಲಿ ವಾಸವಾಗಿದ್ದೇವೆ. ನಾನು 2019 ನವೆಂಬರ್ ತಿಂಗಳಲ್ಲಿ ನನ್ನ ಮಗಳ ಮನೆಗೆ ಬಂದಿದ್ದೆ. ದಿನಾಂಕ ನೆನಪಿಲ್ಲ. ಬಸ್ಸನಲ್ಲಿ ತಿರುಪತಿಗೆ ಹೋಗಿದ್ದೇವು. ತಿರುಪತಿಯಿಂದ 2 ದಿನ ಬಿಟ್ಟು ವಾಪಸ್ಸು ಬಂದಿರುತ್ತೇವೆ. ಶೀಟುಗಳನ್ನು ಒಡೆದು ಹಾಕಿರುವುದನ್ನು ನಾನು ನೋಡಿರುವುದಿಲ್ಲ, ಆದರೆ ಪಕ್ಕದ ಮನೆಯವರು ಆರೋಪಿಯೇ ಒಡೆದು ಹಾಕಿರುತ್ತಾರೆ ಎಂದು ಹೇಳಿರುತ್ತಾರೆ. ನನಗೆ ಬೆಟ್ಟೇಗೌಡರು ಈ ವಿಷಯವನ್ನು ನನಗೆ ಹೇಳಿರುತ್ತಾರೆ.

ಈ ವಿಚಾರವನ್ನು ಹೇಳಿಕೆಯಲ್ಲಿ ಹೇಳಿಲ್ಲ ಎಂದರೆ ದೂರಿನಲ್ಲಿ ಹೇಳಿರುತ್ತೇನೆ ಎಂದು ನುಡಿಯುತ್ತಾರೆ. ದೂರನ್ನು ಕೊಟ್ಟ ದಿನಾಂಕ ಗೊತ್ತಿಲ್ಲ. ಘಟನೆ ನಡೆದ ಮಾರನೇ

ದಿನ ದೂರನ್ನು ಕೊಟ್ಟಿರುತ್ತೇವೆ. ನಾನು 2019 ರಲ್ಲಿ ತಿರುಪತಿಗೆ ಹೋಗಿಲ್ಲ ಮತ್ತು ಪೋಲೀಸರಿಗೆ ಯಾವುದೇ ದೂರನ್ನು ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಯು ಶೀಟುಗಳನ್ನು ಒಡೆದು ಹಾಕಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ 1 ರವರು ನನ್ನ ಮಗಳಾಗಿದ್ದರಿಂದ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಆರೋಪಿಯು ಚಾಸಾ 1 ರವರನ್ನು ಬಟ್ಟೆ ಬಿಚ್ಚಿಸಿ ಮೆರವಣಿಗೆ ಮಾಡುತ್ತೇನೆ ಎಂದು ಬೆದರಿಕೆ ಹಾಕಿರಲಿಲ್ಲ ಎಂದರೆ ಸರಿಯಲ್ಲ. ಚಾಸಾ 1 ರವರು ಈ ಮೊದಲೇ ಸುಳ್ಳು ದೂರನ್ನು ಕೊಟ್ಟಿದ್ದರು ಅದು ವಜಾ ಆಗಿದೆ ಎಂದರೆ ಸರಿಯಲ್ಲ. ಆರೋಪಿಗೆ ವಿನಾಕಾರಣ ತೊಂದರೆ ಕೊಡುವ ವಿಚಾರಕ್ಕೆ ನನ್ನ ಮಗಳ ಮೂಲಕ ಸುಳ್ಳು ದೂರನ್ನು ಕೊಡಿಸಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆಃ ಇಲ್ಲ</u>

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು. ಸಾಕ್ಷಿಯ ಎದುರಿನಲ್ಲಿ ಓದಿ ಹೇಳಿದ ಮೇಲೆ ಸರಿ ಇದೆ ಎಂದು ಒಪ್ಪಿ ಸಹಿ ಮಾಡಲಾಯಿತು.)

ಓ ಹೇ ಕೇ ಸ ಇ ಒ

1 ನೇ ಅ. ಮು. ನ್ಯಾ.ದಂ. ನ್ಯಾ